Akashvani: Bangalore
National Bulletin In Kannada
01.08.2026: 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
01.08.2026: 7.35AM
**********

ಮುಖ್ಯಾಂಶಗಳು:

- ದಾರಿ ತಪ್ಪಿದ ಯುವಜನತೆಯನ್ನು ನಿಂದಿಸದೆ, ಅವರ ಬಗ್ಗೆ ಸಹಾನುಭೂತಿ ತೋರಿಸುವಂತೆ ದೇಶವಾಸಿಗಳಿಗೆ ಪ್ರಧಾನಿ ಮನವಿ
- ಪ್ರಧಾನಿ ನರೇಂದ್ರ ಮೋದಿ ಇಂದು ಆಂಧ್ರಪ್ರದೇಶ ಮತ್ತು ಕರ್ನಾಟಕಕ್ಕೆ ಭೇಟಿ; ಆಂಧ್ರಪ್ರದೇಶದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆ
- ಪಿಎಂ-ಕಿಸಾನ್ ಯೋಜನೆಯನ್ನು ಮುಂದಿನ ಐದು ವರ್ಷಗಳ ಕಾಲ ಮುಂದುವರಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ
- ಗ್ಲಾಸ್ಗೋ ಕಾಮನ್‌ವೆಲ್ತ್ ಕ್ರೀಡಾಕೂಟ : ಭಾರತಕ್ಕೆ ಜೂಡೊದಲ್ಲಿ ಐತಿಹಾಸಿಕ ೨ ಚಿನ್ನ, ಬಾಕ್ಸಿಂಗ್‌ನಲ್ಲಿ ೧೦ ಆಟಗಾರರು ಫೈನಲ್ ಪ್ರವೇಶ

*********

ನಿಂದನೆ ಮತ್ತು ದ್ವೇಷ ಎಂದಿಗೂ ಯಾವುದನ್ನೂ ಪರಿಹರಿಸುವುದಿಲ್ಲ. ದಾರಿ ತಪ್ಪಿದ ಯುವಜನತೆ ಬಗ್ಗೆ ಸಹಾನುಭೂತಿ ತೋರಿಸುವಂತೆ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಪೋಸ್ಟ್ ಮಾಡಿರುವ ವೀಡಿಯೊ ಸಂದೇಶದಲ್ಲಿ ಅವರು, ದಾರಿ ತಪ್ಪಿದ ಯುವ ಜನತೆಗೆ ಶಿಕ್ಷೆ ನೀಡುವ ಬದಲು ಯುವ ಜನತೆಯನ್ನು ರಾಷ್ಟ್ರ ನಿರ್ಮಾಣ ಮತ್ತು ರಾಷ್ಟ್ರೀಯ ಹಿತಾಸಕ್ತಿಯ ಉತ್ಸಾಹದಲ್ಲಿ ಸರಿಯಾದ ಹಾದಿಗೆ ಕರೆದೊಯ್ಯಬೇಕು ಎಂದು ತಿಳಿಸಿದ್ದಾರೆ. ಪ್ರಧಾನಿಯವರು ಇತ್ತೀಚೆಗೆ ರಾಷ್ಟ್ರ ರಾಜಧಾನಿಯ ಜಂತರ್ ಮಂತರ್‌ನಲ್ಲಿ ನಡೆದ ಘಟನೆಯನ್ನು ಉಲ್ಲೇಖಿಸಿದ್ದು, ತಮ್ಮ ಮತ್ತು ತಮ್ಮ ದಿವಂಗತ ತಾಯಿಯ ವಿರುದ್ಧ ನಿಂದನೀಯ ಭಾಷೆಯನ್ನು ಬಳಸಲಾಯಿತು. ಈ ಘಟನೆಯನ್ನು ದೇಶಾದ್ಯಂತ ಮತ್ತು ಪ್ರಪಂಚದಾದ್ಯಂತ ಜನರು ನೋಡಿದ್ದಾರೆ. ಅಂತಹ ನಡವಳಿಕೆಯ ಬಗ್ಗೆ ಸಮಾಜದಲ್ಲಿರುವ ಕೋಪ ಮತ್ತು ನಿರಾಶೆ ಅರ್ಥವಾಗುವಂತಹದ್ದಾಗಿದ್ದರೂ, ಬಾಲ್ಯ ಕಲಿಕೆಯ, ತಪ್ಪುಗಳನ್ನು ಮಾಡುವ ಮತ್ತು ಅವುಗಳನ್ನು ಸರಿಪಡಿಸುವ ಹಂತವಾಗಿದೆ ಎಂದು ಹೇಳಿದ್ದಾರೆ. ಅಂತಹ ಯುವ ಜನತೆಯನ್ನು ನ್ಯಾಯಾಲಯದ ವಿಚಾರಣೆಗೆ ಎಳೆಯುವ ಅಥವಾ ಸಾಮಾಜಿಕ ಕಿರುಕುಳಕ್ಕೆ ಒಳಪಡಿಸುವ ಬದಲು, ಸಮಾಜ ಅವರನ್ನು ಅಪ್ಪಿಕೊಂಡು ಸರಿಯಾದ ಮಾರ್ಗವನ್ನು ತೋರಿಸಬೇಕು.

ಇದೇ ವೇಳೆ ಅಂತಹ ನಡವಳಿಕೆಯಲ್ಲಿ ಭಾಗಿಯಾಗಿರುವ ಮಕ್ಕಳನ್ನು ಕ್ಷಮಿಸಲು ಬಯಸುತ್ತೇನೆ ಎಂದಿರುವ ಅವರು, ಜನರು ಕೂಡ ದಾರಿ ತಪ್ಪಿದ ಯುವ ಜನತೆಯ ಬಗ್ಗೆ ಸಹಾನುಭೂತಿ ಮತ್ತು ತಿಳಿವಳಿಕೆಯ ಮನೋಭಾವವನ್ನು ಸ್ವೀಕರಿಸಬೇಕೆಂದು ಮನವಿ ಮಾಡಿದ್ದಾರೆ. ಶಿಕ್ಷೆಗಿಂತ ಮಾರ್ಗದರ್ಶನದ ಮಹತ್ವದ ಕುರಿತು ಹೇಳಿದ ಪ್ರಧಾನಿ, ದಾರಿ ತಪ್ಪುವ ಯುವ ಜನತೆಯ ಬೆಂಬಲ ಮತ್ತು ಸಕಾರಾತ್ಮಕ ಮಾರ್ಗದರ್ಶನದ ಅಗತ್ಯವಿದೆ. ಇದರಿಂದ ಯುವ ಜನರು ಜವಾಬ್ದಾರಿಯುತ ನಾಗರಿಕರಾಗಬಹುದು ಎಂದು ಪ್ರಧಾನಿ ತಿಳಿಸಿದ್ದಾರೆ. ಯುವಜನರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ತಮ್ಮ ತಪ್ಪುಗಳಿಂದ ಕಲಿಯಿರಿ, ಆತ್ಮವಿಶ್ವಾಸದಿಂದ ಮುಂದುವರಿಯಿರಿ ಮತ್ತು ರಾಷ್ಟ್ರ ನಿರ್ಮಾಣಕ್ಕೆ ತಮ್ಮನ್ನು ತಾವು ಅರ್ಪಿಸಿಕೊಳ್ಳಿ ಎಂದು ಒತ್ತಾಯಿಸಿದ್ದಾರೆ. ಭಾರತ ವೇಗವಾಗಿ ಪ್ರಗತಿ ಸಾಧಿಸುತ್ತಿದೆ ಎಂದು ಹೇಳಿದ ಅವರು, ಪ್ರತಿಯೊಬ್ಬ ಯುವಕರು ತಮ್ಮ ಕನಸುಗಳನ್ನು ಅನುಸರಿಸುವ ಮೂಲಕ ಮತ್ತು ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವ ಮೂಲಕ ಜೀವನದಲ್ಲಿ ಮುನ್ನಡೆ ಸಾಧಿಸುತ್ತಾರೆ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

*********

ಪ್ರಧಾನಿ ನರೇಂದ್ರ ಮೋದಿ ಇಂದು ಆಂಧ್ರಪ್ರದೇಶ ಮತ್ತು ಕರ್ನಾಟಕಕ್ಕೆ ಒಂದು ದಿನದ ಭೇಟಿ ನೀಡಲಿದ್ದಾರೆ. ಮೊದಲು ಅವರು ಆಂಧ್ರಪ್ರದೇಶಕ್ಕೆ ಭೇಟಿ ನೀಡಲಿದ್ದು, ವಿಜಯನಗರ ಜಿಲ್ಲೆಯ ಭೋಗಪುರಂನಲ್ಲಿ ಸುಮಾರು ೧೮ ಸಾವಿರ ಕೋಟಿ ರೂಪಾಯಿ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ ಮತ್ತು ರಾಷ್ಟ್ರಕ್ಕೆ ಲೋಕಾರ್ಪಣೆ ಮಾಡಲಿದ್ದಾರೆ. ಪ್ರಧಾನಿ ಅವರು, ಭೋಗಪುರಂನಲ್ಲಿ ಅಲ್ಲೂರಿ ಸೀತಾರಾಮ ರಾಜು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಉದ್ಘಾಟಿಸಲಿದ್ದಾರೆ. ಈ ವಿಮಾನ ನಿಲ್ದಾಣವನ್ನು ಐದು ಸಾವಿರದ ಆರುನೂರು ಕೋಟಿ ರೂಪಾಯಿಗಳಿಗೂ ಹೆಚ್ಚು ವೆಚ್ಚದಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಕ್ರಮದಲ್ಲಿ ನಿರ್ಮಿಸಲಾಗಿದೆ. ಪ್ರಧಾನಿ ಅವರು ವಿಶಾಖಪಟ್ಟಣಂನಲ್ಲಿ ನಾಲ್ಕುನೂರ ಅರವತ್ತು ಕೋಟಿ ರೂಪಾಯಿಗಳಿಗೂ ಹೆಚ್ಚು ಹೂಡಿಕೆಯೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿರುವ ಎಎಸ್ಐಪಿ ಸೆಮಿಕಂಡಕ್ಟರ್ ಯೋಜನೆಗೆ ಕೂಡ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಇದು ಭಾರತ ಸೆಮಿಕಂಡಕ್ಟರ್ ಮಿಷನ್ ಅಡಿಯಲ್ಲಿ ಅನುಮೋದಿಸಲಾದ ಆಂಧ್ರಪ್ರದೇಶದ ಮೊದಲ ಸೆಮಿಕಂಡಕ್ಟರ್ ಉತ್ಪಾದನಾ ಸೌಲಭ್ಯವಾಗಿದೆ. ಈ ಸೌಲಭ್ಯವು ವಾರ್ಷಿಕವಾಗಿ ಸುಮಾರು ೯೬ ಮಿಲಿಯನ್ ಸೆಮಿಕಂಡಕ್ಟರ್ ಚಿಪ್‌ಗಳನ್ನು ತಯಾರಿಸಿ, ಹೆಚ್ಚಿನ ಕೌಶಲ್ಯ ಹೊಂದಿರುವ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ. ಕರ್ನೂಲ್ ನವೀಕರಿಸಬಹುದಾದ ಇಂಧನ ವಲಯದ ೪.೫ ಗಿಗಾವ್ಯಾಟ್‌ನ ಮೊದಲನೇ ಹಂತದ ಪ್ರಸರಣ ವ್ಯವಸ್ಥೆಗೆ ಪ್ರಧಾನಿ ಅಡಿಪಾಯ ಹಾಕಲಿದ್ದು, ಇದನ್ನು ವಿಶೇಷ ಉದ್ದೇಶದ ವಾಹನದ ಮೂಲಕ ಪವರ್‌ಗ್ರಿಡ್ ಮೂಲಕ ಸುಮಾರು ಐದು ಸಾವಿರದ ಐದು ನೂರ ಐವತ್ತು ಕೋಟಿ ರೂಪಾಯಿಗಳ ಹೂಡಿಕೆಯೊಂದಿಗೆ ಕಾರ್ಯಗತಗೊಳಿಸಲಾಗುತ್ತಿದೆ. ಇದೇ ವೇಳೆ ಪ್ರಧಾನಿ ಅವರು, ಸುಮಾರು ಮೂರು ಸಾವಿರದ ಐದು ನೂರ ಐವತ್ತು ಕೋಟಿ ರೂಪಾಯಿಗಳ ವೆಚ್ಚದ ಕರ್ನೂಲ್ ಪವನ ಶಕ್ತಿ ವಲಯ ಮತ್ತು ಸೌರಶಕ್ತಿ ವಲಯದ ಭಾಗ ಎ ಮತ್ತು ಭಾಗ ಬಿಗಾಗಿ ಪ್ರಸರಣ ವ್ಯವಸ್ಥೆಯನ್ನು ಉದ್ಘಾಟಿಸಲಿದ್ದಾರೆ.

ಅನಂತಪುರದಲ್ಲಿ ಸೌರಶಕ್ತಿ ವಲಯಕ್ಕಾಗಿ ಪ್ರಸರಣ ಯೋಜನೆಯನ್ನು ಅವರು ಉದ್ಘಾಟಿಸಲಿದ್ದಾರೆ, ಇದನ್ನು ಪವರ್‌ಗ್ರಿಡ್ ಎಂಟು ನೂರು ಕೋಟಿ ರೂಪಾಯಿಗಳಿಗೂ ಹೆಚ್ಚು ವೆಚ್ಚದಲ್ಲಿ ಕಾರ್ಯಗತಗೊಳಿಸಿದೆ. ಈ ಪ್ರಸರಣ ಯೋಜನೆಗಳು ಕರ್ನೂಲ್ ಮತ್ತು ಅನಂತಪುರಂನಲ್ಲಿನ ನವೀಕರಿಸಬಹುದಾದ ಇಂಧನ ವಲಯಗಳಿಂದ ಉತ್ಪಾದಿಸುವ ವಿದ್ಯುತ್ ಅನ್ನು ಸ್ಥಳಾಂತರಿಸಲು ಮತ್ತು ರಾಷ್ಟ್ರೀಯ ಗ್ರಿಡ್ ಮೂಲಕ ದೇಶಾದ್ಯಂತ ಫಲಾನುಭವಿಗಳಿಗೆ ವಿದ್ಯುತ್ ಪ್ರಸರಣವನ್ನು ಸಕ್ರಿಯಗೊಳಿಸುತ್ತವೆ. ಪ್ರಧಾನಿ ನರೇಂದ್ರ ಮೋದಿ ಅವರು, ಒಂದು ಸಾವಿರದ ಎಂಟುನೂರ ಎಂಬತ್ತು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು ರಾಷ್ಟ್ರಕ್ಕೆ ಅರ್ಪಿಸಿ, ಶಿಲಾನ್ಯಾಸ ನೆರವೇರಿಸಲಿದ್ದಾರೆ. ರಾಷ್ಟ್ರೀಯ ಹೆದ್ದಾರಿ-೫೬೫ ರ ಪೆಂಚಲಕೋಣ-ಯೆರ್ಪೇಡು ವಿಭಾಗದ ಲಿಂಗಸಮುದ್ರಂನಲ್ಲಿ ಉನ್ನತ ಮಟ್ಟದ ಸೇತುವೆಯ ಶಿಲಾನ್ಯಾಸವನ್ನೂ ನೆರವೇರಿಸಲಿದ್ದಾರೆ. ಬಳಿಕ ಪ್ರಧಾನಿ ಅವರು ಕರ್ನಾಟಕದ ಮೈಸೂರಿಗೆ ತಲುಪಲಿದ್ದು, ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರದಲ್ಲಿ ವಿವೇಕ ಸ್ಮಾರಕವನ್ನು ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು, ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

*********

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ೨೦೨೬-೨೭ ರಿಂದ ೨೦೩೦-೩೧ ರವರೆಗೆ ಮುಂದುವರಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಐದು ವರ್ಷಗಳ ಅವಧಿಯಲ್ಲಿ ಈ ಯೋಜನೆಗೆ ಒಟ್ಟು ೩.೧೫ ಲಕ್ಷ ಕೋಟಿ ರೂಪಾಯಿಗಳ ಆರ್ಥಿಕ ವೆಚ್ಚವನ್ನು ಅನುಮೋದಿಸಲಾಗಿದೆ ಎಂದು ಹೇಳಿದರು. ರೈತರ ಸಮೃದ್ಧಿಯು ರಾಷ್ಟ್ರದ ಸಮೃದ್ಧಿಯ ಅಡಿಪಾಯವಾಗಿದೆ ಎಂಬ ಸರ್ಕಾರದ ಬದ್ಧತೆಯನ್ನು ಈ ಅನುಮೋದನೆಯು ಪುನರುಚ್ಚರಿಸುತ್ತದೆ. ಪಿಎಂ-ಕಿಸಾನ್ ಯೋಜನೆಯ ಮೂಲಕ, ಅರ್ಹ ರೈತ ಕುಟುಂಬಗಳಿಗೆ ನೇರ ಲಾಭ ವರ್ಗಾವಣೆ ವ್ಯವಸ್ಥೆಯ ಮೂಲಕ ಸಕಾಲಿಕ ಮತ್ತು ಪಾರದರ್ಶಕ ಆದಾಯ ಬೆಂಬಲವನ್ನು ಒದಗಿಸಲಾಗುತ್ತಿದೆ ಎಂದು ಹೇಳಿದರು. ಇಲ್ಲಿಯವರೆಗೆ ೨೨ ಕಂತುಗಳ ಮೂಲಕ ೪.೪೭ ಲಕ್ಷ ಕೋಟಿ ರೂಪಾಯಿಗಳನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ. ಪಿಎಂ-ಕಿಸಾನ್ ಅಡಿಯಲ್ಲಿ ನೀಡಲಾದ ಸಹಾಯವು ರೈತರಿಗೆ ಬೀಜಗಳು, ರಸಗೊಬ್ಬರಗಳು, ನೀರಾವರಿ, ಕೃಷಿ ಯಂತ್ರೋಪಕರಣಗಳು ಮತ್ತು ಇತರ ಕೃಷಿ ಅಗತ್ಯಗಳಲ್ಲಿ ಸಕಾಲಿಕ ಹೂಡಿಕೆ ಮಾಡಲು ಅನುವು ಮಾಡಿಕೊಟ್ಟಿದೆ ಎಂದು ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು. ಇದೇ ವೇಳೆ ೨೦೩೦-೩೧ರ ಹಣಕಾಸು ವರ್ಷದವರೆಗೆ ೮೪ ಸಾವಿರದ ೮೪ ಕೋಟಿ ರೂಪಾಯಿಗಳ ಅನುಮೋದಿತ ವೆಚ್ಚದೊಂದಿಗೆ ರಾಷ್ಟ್ರೀಯ ಕಡಲಾಚೆಯ ಪರಿಶೋಧನಾ ಯೋಜನೆ- ಸಮುದ್ರ ಮಂಥನಕ್ಕೂ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿರುವುದಾಗಿ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಕೇಂದ್ರ ಸಚಿವ ಸಂಪುಟವು ೨೦೨೬-೨೭ರಿಂದ ೨೦೩೦-೩೧ರ ವರೆಗಿನ ಅವಧಿಗೆ ವಿಸ್ತೃತ ಖೇಲೋ ಇಂಡಿಯಾ ಯೋಜನೆ ಹಾಗೂ ರಾಷ್ಟ್ರೀಯ ಕ್ರೀಡಾ ಮಹಾಸಂಘಗಳಿಗೆ ಹೆಚ್ಚುವರಿ ನೆರವು ನೀಡಲು ಒಟ್ಟು ೩೬ ಸಾವಿರ ೪೪೧ ಕೋಟಿ ರೂಪಾಯಿ ವೆಚ್ಚದ ಯೋಜನೆಗೆ ಅನುಮೋದನೆ ನೀಡಿದೆ. ಈ ನಿರ್ಧಾರವು ಯುವಜನರ ಅಭಿವೃದ್ಧಿ ಮತ್ತು ರಾಷ್ಟ್ರ ನಿರ್ಮಾಣಕ್ಕಾಗಿ ಕ್ರೀಡೆಯ ಶಕ್ತಿಯನ್ನು ಬಳಸಿಕೊಳ್ಳುವ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸುತ್ತದೆ ಎಂದು ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

*********

ಗ್ಲಾಸ್ಗೋದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತ ನಿನ್ನೆ ಮತ್ತೊಂದು ಅತ್ಯುತ್ತಮ ಪ್ರದರ್ಶನ ನೀಡಿದೆ. ಜೂಡೊದಲ್ಲಿ ಐತಿಹಾಸಿಕ ೨ ಚಿನ್ನದ ಪದಕಗಳನ್ನು ಗೆಲ್ಲುವುದರ ಜೊತೆಗೆ, ಪುರುಷರ ಜಾವೆಲಿನ್ ಎಸೆತದಲ್ಲಿ ಡಬಲ್ ಪೋಡಿಯಂ ಸಾಧನೆ ಮಾಡಿದೆ. ಡೆಕಾಥ್ಲಾನ್‌ನಲ್ಲಿ ಮೊದಲ ಬಾರಿಗೆ ಕಂಚಿನ ಪದಕ ಗೆದ್ದಿರುವ ಭಾರತ, ಬಾಕ್ಸಿಂಗ್‌ನಲ್ಲಿ ೧೦ ಆಟಗಾರರು ಫೈನಲ್‌ಗೆ ಪ್ರವೇಶಿಸುವ ಮೂಲಕ ಮತ್ತೊಂದು ಸಾಧನೆ ಮಾಡಿದೆ. ಜೂಡೊ ಸ್ಪರ್ಧೆಯಲ್ಲಿ ಅಸ್ಮಿತಾ ಡೇ ಮತ್ತು ಹರ್ಷ್ ಸಿಂಗ್ ಇತಿಹಾಸ ನಿರ್ಮಿಸಿದ್ದು, ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಜೂಡೊ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಆಟಗಾರರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮಹಿಳೆಯರ ೪೮ ಕೆಜಿ ವಿಭಾಗದ ಫೈನಲ್‌ನಲ್ಲಿ ಅಸ್ಮಿತಾ ಡೇ, ಕೆನಡಾದ ಹೈಡಿ ಕ್ಯಾಚ್ ಅವರನ್ನು ಗೋಲ್ಡನ್ ಸ್ಕೋರ್‌ನಲ್ಲಿ ಮಣಿಸಿ ಚಿನ್ನದ ಪದಕ ಗೆದ್ದರು. ಪುರುಷರ ೬೦ ಕೆಜಿ ವಿಭಾಗದಲ್ಲಿ ಹರ್ಷ್ ಸಿಂಗ್, ಆಸ್ಟ್ರೇಲಿಯಾದ ಒಲಿಂಪಿಯನ್ ಜೋಶುವಾ ಕಾಟ್ಜ್ ಅವರನ್ನು ಸೋಲಿಸಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಮಹಿಳೆಯರ ೫೭ ಕೆಜಿ ವಿಭಾಗದಲ್ಲಿ ಯಾಮಿನಿ ಮೌರ್ಯ ಬೆಳ್ಳಿ ಪದಕ ಗೆದ್ದಿದ್ದು, ಜೂಡೊದಲ್ಲಿ ಭಾರತ ೨ ಚಿನ್ನ ಮತ್ತು ೧ ಬೆಳ್ಳಿ ಪದಕಗಳೊಂದಿಗೆ ಕಾಮನ್‌ವೆಲ್ತ್ ಕ್ರೀಡಾಕೂಟದ ತನ್ನ ಅತ್ಯುತ್ತಮ ಸಾಧನೆ ದಾಖಲಿಸಿದೆ. ಅಥ್ಲೆಟಿಕ್ಸ್‌ನಲ್ಲಿ ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ, ಪುರುಷರ ಜಾವೆಲಿನ್ ಎಸೆತದಲ್ಲಿ ಋತುವಿನ ಶ್ರೇಷ್ಠ ೮೫.೮೩ ಮೀಟರ್ ದೂರ ಎಸೆದು ಬೆಳ್ಳಿ ಪದಕ ಗೆದ್ದರು. ಶ್ರೀಲಂಕಾದ ರುಮೇಶ್ ತರಂಗ ಪತಿರಗೆ ೮೯.೭೫ ಮೀಟರ್ ದೂರ ಎಸೆದು ಚಿನ್ನದ ಪದಕ ಪಡೆದರೆ, ಭಾರತದ ಯಶ್ವೀರ್ ಸಿಂಗ್ ತಮ್ಮ ಕೊನೆಯ ಪ್ರಯತ್ನದಲ್ಲಿ ವೈಯಕ್ತಿಕ ಶ್ರೇಷ್ಠ ೮೫.೪೧ ಮೀಟರ್ ದೂರ ಎಸೆದು ಕಂಚಿನ ಪದಕ ತಮ್ಮದಾಗಿಸಿಕೊಂಡರು.

****END*****